ಓಎಸ್ 280/2017

**ಡಿ.ಡಬ್ಲ್ಯೂ: 01.**

ದಿನಾಂಕಃ 12.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ಹೆಚ್ ಕೆ ಎ ವಕೀಲರಿಂದಃ**

ನಾನು ಓದಿರುವುದಿಲ್ಲ. ನಿಮ್ಮ ತಾಯಿ ಹೆಸರು ಸಣ್ಣಮ್ಮ ಎಂದರೆ ಸರಿ. ಸಣ್ಣಮ್ಮರವರ ತವರೂರು ಮಲಗುಂದಿ ಗ್ರಾಮ ಎಂದರೆ ಸರಿ. ಸಣ್ಣಮ್ಮರವರ ತಂದೆಯ ಹೆಸರು ನರಸಯ್ಯ ಹಾಗೂ ತಾಯಿಯ ಹೆಸರು ಮರಿಯಮ್ಮ ಎಂದರೆ ಸರಿ. ಸಣ್ಣಮ್ಮರವರನ್ನು ಪಾಂಡವಪುರ ತಾಲ್ಲೂಕಿನ ಹುಲ್ಲಹಳ್ಳಿ ಗ್ರಾಮದ ಕಾಳಚನ್ನೇಗೌಡರವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಸಣ್ಣಮ್ಮ ಹಾಗೂ ಕಾಳಚನ್ನೇಗೌಡರಿಗೆ ಚನ್ನೇಗೌಡ ಎಂಬ ಮಗ ಇದ್ದಾರೆ ಎಂದರೆ ಗೊತ್ತಿಲ್ಲ. ಸಣ್ಣಮ್ಮರವರಿಗೆ ಇಬ್ಬರು ಗಂಡಂದಿರು ಎಂದರೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ದೊಡ್ಡಣ್ಣೇಗೌಡ. ದೊಡ್ಡಣ್ಣೇಗೌಡರವರು ಸಣ್ಣಮ್ಮರವರ 2ನೇ ಗಂಡ ಎಂದರೆ ಗೊತ್ತಿಲ್ಲ. ದೊಡ್ಡಣ್ಣೇಗೌಡ ಹಾಗೂ ಸಣ್ಣಮ್ಮನವರಿಗೆ 3 ಜನ ಮಕ್ಕಳು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು 4 ಜನ ಮಕ್ಕಳು ಎಂದು ಉತ್ತರಿಸುತ್ತಾರೆ. ನೀವು 1ನೇ ಮಗಳು, 2ನೇ ಮಗ ವಾದಿ, 3ನೇ ಮಗಳು ರೇಣುಕ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 1ನೇ ಮಗ ಚನ್ನೇಗೌಡ, ನಾನು ಚನ್ನೇಗೌಡ ಎಂದು ಉತ್ತರಿಸುತ್ತಾರೆ. ಚನ್ನೇಗೌಡರವರು ದೊಡ್ಡಣ್ಣೇಗೌಡ ಹಾಗೂ ಸಣ್ಣಮ್ಮರವರ ಮಗ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಚನ್ನೇಗೌಡರವರು ಕಾಳಚನ್ನೇಗೌಡರವರ ಮಗ, ನೀವು ಅವರು ದೊಡ್ಡಣ್ಣೇಗೌಡರವರ ಮಗ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಮ್ಮನ್ನು ಗುಜಗಣ್ಣಪುರಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ಗಂಡನ ಹೆಸರು ಚಿಕ್ಕಣ್ಣೇಗೌಡ ಎಂದರೆ ಸರಿ. 3ನೇ ಪ್ರತಿವಾದಿಯನ್ನು ನಲ್ಲೂರು ಪಾಲ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಈಗ ಮೈಸೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ದಾವಾಸ್ತಿ ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಐಟಂ ನಂ.2 ಆಸ್ತಿಯನ್ನು ನೀವು ಹುಟ್ಟುವ ಮೊದಲೇ ದೊಡ್ಡಣ್ಣೇಗೌಡ ಹಾಗೂ ಸಣ್ಣಮ್ಮರವರು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದ ನಾವು ಕಾಡನ್ನು ಕಡಿದು ನಂತರ ಸಾಗುವಳಿ ಮುಖಾಂತರ ದಾವಾಸ್ತಿಗಳು ಬಂದಿರುತ್ತದೆ. ಅರ್ಜಿಯನ್ನು 1ನೇ ಪ್ರತಿವಾದಿ ನೀಡಿರುತ್ತಾರೆ.

ಡಿ.ಡಬ್ಲ್ಯೂ: 01.

ಮಕ್ಕಳು ಹುಟ್ಟುವ ಹಿಂದಿನಿಂದಲೂ ದೊಡ್ಡಣ್ಣೇಗೌಡ ಹಾಗೂ ಸಣ್ಣಮ್ಮರವರು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಐಟಂ ನಂ.1ರ ಸ್ವತ್ತನ್ನು ಬಗರ್ ಹುಕುಂ ಅಡಿಯಲ್ಲಿ ನಿಮ್ಮೊಂದಿಗೆ ದೊಡ್ಡಣ್ಣೇಗೌಡರು ಮುಂಚಿನಿಂದಲೂ ಉಳುಮೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.1ನ್ನು ಖಾಯಂ ಮಾಡಲು ದೊಡ್ಡಣ್ಣೇಗೌಡರೇ ಅರ್ಜಿ ನೀಡಿದ್ದರು ಎಂದರೆ ಗೊತ್ತಿಲ್ಲ. ನಿಮ್ಮ ತಂದೆ ತೀರಿಕೊಂಡು 36 ವರ್ಷಗಳಾಗಿರುತ್ತದೆ ಎಂದರೆ ಸಾಕ್ಷಿ 37 ವರ್ಷಗಳಾಗಿವೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ತೀರಿಕೊಳ್ಳುವವರೆಗೂ ನಿಮ್ಮ ತಂದೆಯೊಂದಿಗೆ ವಾದಿ ಹಾಗೂ ಪ್ರತಿವಾದಿಗಳು ಒಟ್ಟಾಗಿ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಐಟಂ ನಂ.1ಕ್ಕೆ ದರಕಾಸ್ತನ್ನು ನೀಡುವಾಗ ನಿಮ್ಮ ತಂದೆ ತೀರಿಕೊಂಡ ಕಾರಣ ಒಟ್ಟು ಕುಟುಂಬದ ಪರವಾಗಿ 1ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ ಎನ್ ಡಿ 33/1991-92ರ ಪ್ರಕಾರ 1ನೇ ಪ್ರತಿವಾದಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ದಾವಾ ಐಟಂ ನಂ.1 ಸ್ವತ್ತು ಯಾವ ರೀತಿ ಬಂದಿರುತ್ತದೆ ಎಂದು ನಿಮಗೆ ತಿಳಿದಿಲ್ಲ ಎಂದರೆ ಸರಿ. 1ನೇ ಪ್ರತಿವಾದಿ ಇಂದಿಗೂ ಸಹ ಗ್ರಾಮದಲ್ಲಿ ಓಡಾಡಿಕೊಂಡು ಆರೋಗ್ಯವಾಗಿದ್ದಾರೆಂದರೆ ಸರಿಯಲ್ಲ. 1ನೇ ಪ್ರತಿವಾದಿ ನಿಮ್ಮೊಂದಿಗೆ ವಾಸವಾಗಿದ್ದಾರೆ ಎಂದರೆ ಸರಿ. ದಾವಾ ಐಟಂ ನಂ.2ರಲ್ಲಿ ಅರ್ಧ ಭಾಗದಲ್ಲಿ ನೀವು ವಾಸವಾಗಿದ್ದೀರಿ ಹಾಗೂ ಇನ್ನರ್ಧ ಭಾಗದಲ್ಲಿ ವಾದಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮುಕ್ಕಾಲು ಭಾಗದಲ್ಲಿ ವಾದಿ ವಾಸವಾಗಿದ್ದಾರೆ , ಕಾಲು ಭಾಗದಲ್ಲಿ ನಾವು ವಾಸವಾಗಿದ್ದೇವೆ ಎಂದು ಉತ್ತರಿಸುತ್ತಾರೆ. ವಾದಿ ಯಾವ ಪರಿಹಾರವನ್ನು ಕೋರಿ ಈ ದಾವೆಯನ್ನು ಹೂಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ವಾದಿ ಸಲ್ಲಿಸಿರುವ ದಾವೆಗೆ ತಕರಾರು ಸಲ್ಲಿಸಿರುವುದಿಲ್ಲ. ತಕರಾರಿನಲ್ಲಿ ಬರೆದಿರುವ ವಿಚಾರವನ್ನು ನಾನು ತಿಳಿದುಕೊಂಡಿಲ್ಲ. ತಕರಾರಿನಲ್ಲಿ ಬರೆದಿರುವ ವಿಚಾರವೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ದಾವಾ ಐಟಂ ನಂ.1ರ ಸ್ವತ್ತು ಒಟ್ಟು ಕುಟುಂಬದ ಆಸ್ತಿ ನೀವು ಹೇಳುವ ಹಾಗೆ 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಲ್ಲ ಎಂದರೆ ಸರಿಯಲ್ಲ.

ನೀವು ವಾದಿಗೆ ಹಕ್ಕಿಲ್ಲವೆಂದು ಹೇಳಿದ್ದು, ಆದರೆ ವಾದಿ ಸಣ್ಣಮ್ಮರವರ ಮಗನಾದ ಕಾರಣ ಆತನಿಗೂ ಸಹ ದಾವಾಸ್ತಿಗಳ ಮೇಲೆ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿ ಐಟಂ ನಂ.1 ರ ಜಂಟಿ

ಸ್ವಾಧೀನದಲ್ಲಿದ್ದಾರೆ ಹಾಗೂ ಅವರು 1 ½ ಎಕರೆಯಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನೀವು ಒಟ್ಟು ಕುಟುಂಬದ ಎಲ್ಲಾ ಸದಸ್ಯರನ್ನು ಸೇರಿಸಿಲ್ಲ ಎಂದು ಹೇಳಿದ್ದು, ಆದರೆ ಈ ದಾವೆಯಲ್ಲಿ ಎಲ್ಲಾ ಸದಸ್ಯರನ್ನು ಸೇರಿಸಿದ್ದೇವೆ ಹಾಗೂ ಚನ್ನೇಗೌಡ ಒಟ್ಟು ಕುಟುಂಬದ ಸದಸ್ಯನಲ್ಲ ಎಂದರೆ ಸರಿಯಲ್ಲ. ಚನ್ನೇಗೌಡರವರು ಕಾಳಚನ್ನೇಗೌಡರವರ ಮಗನಾದ ಕಾರಣ ಆತನಿಗೆ ಕಾಳಚನ್ನೇಗೌಡರವರ ಆಸ್ತಿಯ ಮೇಲೆ ಮಾತ್ರ ಅಧಿಕಾರ ಇದೆ, ದೊಡ್ಡಣ್ಣೇಗೌಡರವರ ಆಸ್ತಿಯ ಮೇಲೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಚನ್ನೇಗೌಡರವರ ಹೆಂಡತಿಯ ಹೆಸರು ಲಕ್ಷ್ಮಮ್ಮ, ಲಕ್ಷಮ್ಮನವರ ಅಕ್ಕನ ಹೆಸರು ಸರೋಜಮ್ಮ ಎಂದರೆ ಸರಿ. ಸರೋಜಮ್ಮ ಎನ್ನುವವರನ್ನು ಕುಟ್ಟವಾಡಿ ಗ್ರಾಮದ ಕರಿಗೌಡರವರಿಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಲಕ್ಷಮ್ಮ ಹಾಗೂ ಚನ್ನೇಗೌಡರವರು ಸರೋಜಮ್ಮನವರ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನೀವು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನಿಮಗೆ ತಿಳಿದಿಲ್ಲ ಎಂದರೆ ಸರಿ. ನಿಮಗೆ ಈ ದಾವೆಯ ವಿಚಾರವಾಗಿ ಏನೂ ತಿಳಿಯದಿದ್ದರೂ ನಿಮ್ಮ ಗಂಡನ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಆಚೆ ಬರುತ್ತದೆ ಎಂದು ಅವರ ಪರವಾಗಿ ನೀವು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸುಮಾರು 75 ವರ್ಷ ವಯಸ್ಸಾಗಿದೆ. 1 ನೇ ಪ್ರತಿವಾದಿ ಹೆಬ್ಬೆಟ್ಟು ಹಾಕುತ್ತಾರೆ. ನಿಡಿ2 ನ್ನು ನೀವು ಸೃಷ್ಟಿಸಿದ್ದೀರಿ ಹಾಗೂ 1 ನೇ ಪ್ರತಿವಾದಿಗೆ ತಿಳಿಯದ ಹಾಗೆ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ವಿಲ್ ಎಂಬ ವಿಚಾರವೂ ತಿಳಿದಿಲ್ಲ, ನೀವು ನಿಮ್ಮ ಗಂಡನ ಚಿತಾವಣೆ ಮೇರೆಗೆ ನಿಡಿ2 ನ್ನು ಬರೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

ದಾವಾ ಐಟಂ ನಂ.1 ಒಟ್ಟು ಕುಟುಂಬದ ಆಸ್ತಿಯಾದ ಕಾರಣ 1 ನೇ ಪ್ರತಿವಾದಿಗೆ ವಿಲ್ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನೀವು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಿಡಿ2 ನ್ನು ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಡಿ2 ನ್ನು ಬರೆಸಿಕೊಳ್ಳುವ ಸಮಯದಲ್ಲಿ

ನಾನು ನನ್ನ ತಾಯಿ ಮತ್ತು ಸಾಕ್ಷಿದಾರರಾದ ನಿಂಗಪ್ಪನವರು ಹೋದೆವು. ನಿಡಿ2 ನ್ನು ಬರೆದವರ ಹೆಸರು ಮರೆತು ಹೋಗಿದ್ದೇನೆ. 1 ನೇ ಪ್ರತಿವಾದಿ ಯಾವುದೇ ಮರಣ ಶಾಸನ ಪತ್ರವನ್ನು ಬರೆದಿರುವುದಿಲ್ಲ,

ಡಿ.ಡಬ್ಲೂ: 01.

ನೀವು ವಾದಿಗೆ ಸೇರಿರುವ ಒಂದೂವರೆ ಎಕರೆ ಜಮೀನನ್ನು ಕಬಳಿಸುವ ಉದ್ದೇಶದಿಂದ ನಿಡಿ2 ನ್ನು ಬರೆಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ನಿಡಿ2 ನ್ನು ಬರೆದವರು ಯಾರು ಎಂದು ಗೊತ್ತಿಲ್ಲ ಹಾಗೂ ಸಾಕ್ಷಿದಾರರು ಗೊತ್ತಿಲ್ಲ. ನೀವು ಹಾಗೂ ನಿಮ್ಮ ಗಂಡ ಸೇರಿ ನಿಡಿ2 ನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ**ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.